[ Govt. of Karnataka C.R.P. 67]

| |
|---|
| **Deposition Sheets (RP.No.57) Form No.4 (Civil)** |

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 533/2024**

ಪಿ.ಡಬ್ಲ್ಯೂಃ 8 ಸಿ.ಡಬ್ಲ್ಯೂಃ 16

ಸಾಕ್ಷಿದಾರನ ಹೆಸರು : ಸಂತೋಷ್ ಶೆಟ್ಟಿ

ತಂದೆಯ ಹೆಸರು : ಹಿರಿಯಣ್ಣ ಶೆಟ್ಟಿ

ಪ್ರಾಯ : 45 ವರ್ಷ

ಉದ್ಯೋಗ : ಹಿರಿಯ ಮೋಟಾರು ವಾಹನ ನಿರಿಕ್ಷಕರು, ಉಡುಪಿ

ವಾಸ : ಉಡುಪಿ

ದಿನಾಂಕ 21.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ</u>

ನಾನು ಸಪ್ಟೆಂಬರ್ 2018 ರಿಂದ ಉಡುಪಿ ಆರ್ ಟಿ ಓ ಕಚೇರಿಯಲ್ಲಿ ಹಿರಿಯ ಮೋಟಾರು ವಾಹನ ನಿರಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 29.01.2024 ರಂದು ವೃತ್ತ ನೀರಿಕ್ಷಕರು ಕಾರ್ಕಳ ವೃತ್ತ ಇವರಿಂದ ಅಪಘಾತಕ್ಕೊಳಪಟ್ಟ ವಾಹನವನ್ನು ಪರಿಶಿಲಿಸಲು ಮನವಿ ಬಂದ ಮೇರೆಗೆ ಅದೇ ದಿನ ಸಂಜೆ 4.30 ಗಂಟೆಗೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣಾ ಆವರಣಕ್ಕೆ ಭೇಟಿ ನೀಡಿ ವಾಹನ ಸಂ. ಕೆಎ-19-ಎಸಿ-3936 ಮತ್ತು ಮೋಟಾರು ಕ್ಯಾಬ್ ಮತ್ತು ಕೆಎ- 19-ಎಂಸಿ-6961 ಲಘು ವಾಹನವನ್ನು ಪರಿಶೀಲಿಸಿರುತ್ತೇನೆ.

ವಾಹನ ಸಂ. ಕೆಎ-19-ಎಸಿ-3936 ರ ಬಲಭಾಗದ ಮಿರರ್ ಒಡೆದಿತ್ತು , ಮುಂಭಾಗದ ಬಂಪರ್ ನ ಬಲ ಭಾಗ ಉಜ್ಜಿತ್ತು, ಬಲ ಭಾಗದ ಮುಂದಿಯ ಪೆಂಡರ್ ತಗ್ಗಿತ್ತು ಹಾಗೂ ಉಜ್ಜಿತ್ತು, ಬಲಭಾಗದ ಮುಂದಿನ ಬಾಗಿಲು ಹಾಗೂ ರನ್ನಿಂಗ್ ಬೋರ್ಡ್ ಜಖಂಗೊಂಡು ಬಾಗಿತ್ತು, ತಗ್ಗಿದ್ದವು ಹಾಗೂ ಉಜ್ಜಿದ್ದವು, ಸೆಂಟರ್ ಕೋಸ್ಟ್ ಜಖಂಗೊಂಡಿತ್ತು , ಬಲಭಾಗದ ಹಿಂದಿನ ಬಾಗಿಲು ನುಜ್ಜುಗುಜ್ಜಾಗಿತ್ತು, ತುಂಡಾಗಿ ತೆರೆದಿತ್ತು ಹಾಗೂ ಮುಂದಕ್ಕೆ ತಲ್ಲಲ್ಪಟ್ಟಿತ್ತು ,

ಬಲಭಾಗದ ಹಿಂಬದಿಯ ಕಾರ್ಟರ್ ಪೆನಲ್ ನ ಮುಂಬದಿಯ ಅರ್ಧ ಭಾಗ ತಗ್ಗಿತ್ತು , ಹಿಂಭಾಗದ ಬಂಪರ್ ಮಧ್ಯಭಾಗ ತುಂಡಾಗಿತ್ತು, ಬಾಗಿತ್ತು ಹಾಗೂ ಉಜ್ಜಿತ್ತು, ಹಿಂದಿನ ಬಾಗಿಲಿನ ಮಧ್ಯಭಾಗ , ರಿಯರ್ ಅಂಡ್ ಪೆನಲ್ , ಗೂಡ್ಸ್ ಪೇಸ್ ಜಖಂಗೊಂಡು ಬಾಗಿದ್ದವು, ಎಡಭಾಗದ ಹಿಂಬದಿಯ ಕ್ವಾರ್ಟರ್ ಪೆನಲ್ ಮುಂಬ ,ಾಗದಲ್ಲಿ ತಗ್ಗಿತ್ತು, ಬ ಲಭಾಗದ ಹಿಂದಿನ ಚಕ್ರದ ಡಿಸ್ಕ್, ಹಬ್ ಹಾಗೂ ಸಸ್ಪೆನ್ಷನ್ ಬಾಗಿತ್ತು, ಟಯರ್ ತುಂಡಾಗಿತ್ತು.

ವಾಹನ ಸಂ. ಕೆಎ- 19-ಎಂಸಿ-6961 ರ ಮುಂಭಾಗದ ಬಂಪರ್ ನ ಎಡತುದಿ ಉಜ್ಜಿತ್ತು, ಬಾನೆಟ್ ಪ್ಯಾನಲ್ ಬಲತುದಿ ಬಾಗಿತ್ತು ಹಾಗೂ ತಗ್ಗಿತ್ತು, ಮುಂಭಾಗದ ಬಂಪರ್ ನ ಮಧ್ಯದ ಹಾಗೂ ಬಲ ಭಾಗ ಒಡೆದು ತುಂಡುತುಂಡಾಗಿತ್ತು , ಬಲಭಾಗದ ಹೆಡ್ ಲೈಟ್ ನುಜ್ಜುಗುಜ್ಜಾಗಿತ್ತು , ಬಲಭಾಗದ ಮುಂಬದಿಯ ಪೆಂಡರ್ ನುಜ್ಜುಗುಜ್ಜಾಗಿತ್ತು ಹಾಗೂ ಮಡಚಿತ್ತು , ಬಲಭಾಗದ ಮಿರರ್ ಅಸೆಂಬ್ಲಿ ತುಂಡಾಗಿತ್ತು, ಬಲಭಾಗದ ಮುಂದಿನ ಚಕ್ರ ಡಿಸ್ಕ್ ಬಾಗಿತ್ತು , ಟಯರ್ ಉಜ್ಜಿತ್ತು , ಸಸ್ಪೆನ್ಷನ್ ಬಾಗಿತ್ತು , ರೆಡಿಯೆಟರ್ ಸಪೋರ್ಟ್ ಅಸೆಂಬ್ಲಿಯ ಬಲ ತುದಿ ಜಖಂಗೊಂಡು ಬಾಗಿತ್ತು , ಮುಂಭಾಗದ ಕ್ರಾಸ್ ಮೆಂಬರ್ ನ ಬಲ ತುದಿ ಜಖಂಗೊಂಡು ಬಾಗಿತ್ತು, ರೆಡಿಯೆಟರ್ ಹಾಗೂ ಕಂಡೆಸ್ಸರ್ ಬಾಗಿದ್ದವು.

ವಾಹನಗಳ ಉಳಿದ ಭಾಗಗಳು ಸುಸ್ಥಿತಿಯಲ್ಲಿದ್ದವು. 2 ವಾಹನಗಳನ್ನು ನಿಂತ ಸ್ಥಿತಿಯಲ್ಲಿ ಪರಿಶೀಲಿಸಿದ್ದು ಅಡೆ ತಡೆಗಳು ಸುಸ್ಥಿತಿಯಲ್ಲಿದ್ದವು.

ನನ್ನ ಅಭಿಪ್ರಾಯದಂತೆ ಸದ್ರಿ ಅಪಘಾತವು ವಾಹನದ ಯಾವುದೇ ಯಾಂತ್ರಿಕ ದೋಷಾದಿಂದ ಆಗಿರುವುದಿಲ್ಲ. ಈಗ ನಾನು ನೋಡಿದ ದಾಖಲೆಯು ನಾನು ನೀಡಿದ ವರದಿಯಾಗಿದ್ದು ಅದರಲ್ಲಿ ನನ್ನ ಸಹಿ ಇದ್ದು ಅದನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ದಾಖಲೆಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನಿಪಿ- 6, 8 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದೇನೆ.

ಪಾಟೀ ಸವಾಲು ಃ ಆರೋಪಿ ಪರಃ ಶ್ರೀ ಪಿ ಡಿ ಜೆ ವಕೀಲರಿಂದ ಃ

2 ವಾಹನಗಳಲ್ಲಿ ಯಾವ ವಾಹನ ಅತೀವೇಗ ಹಾಗೂ ಅಜಾಗರೂಕತೆಯಿಂ ಚಲಾಯಿಸಿದ್ದು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಆದುದರಿಂದ ನಾನು ನನ್ನ ವರದಿಯಲ್ಲಿ ಅದರ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಾನು ಸ್ಥಳ ಮಹಜರನ್ನು ನೋಡಿರುವುದಿಲ್ಲ.

ಮರು ವಿಚಾರಣೆ ಃ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ